No:SSA/CALC/UPS/2012-13

Date: 24.09.2013

## ಜ್ಞಾಪನಾ

ವಿಷಯ: 2012-13ನೇ ಸಾಲಿನ ಸಿ.ಎ.ಎಲ್.ಸಿ ಶಾಲೆಗಳಿಗೆ ಕಂಪ್ಯೂಟರ್ ಮತ್ತು ಯು.ಪಿ.ಎಸ್‌ಗಳನ್ನು ಸರಬರಾಜು ಮಾಡಿದ್ದು, ಇವುಗಳ ವಾರ್ಷಿಕ ಕಾರ್ಯನಿರ್ವಹಣೆಯ (ಎ.ಎಂ.ಸಿ) ಬಗ್ಗೆ

ಉಲ್ಲೇಖ: 1) ಸಶಿಅ/ಸಿಎಎಲ್‌ಸಿ/ಪಿಎಬಿ/2012-13 ದಿನಾಂಕ:23/6/2012

2) ಸಶಿಅ/ಸಿಎಎಲ್‌ಸಿ/ಕೊಠಡಿ ಸಿದ್ಧತೆ/2012-13 ದಿನಾಂಕ:17/4/2013

------

ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(2)ರ ಪತ್ರದಲ್ಲಿ ಮೆ॥Ninerich Infotech ಸಂಸ್ಥೆಯವರು **2012-13ನೇ** ಸಾಲಿನ 602 ಸಿ.ಎ.ಎಲ್.ಸಿ ಶಾಲೆಗಳಿಗೆ ತಲಾ 05 ಡೆಸ್ಕ್‌ಟಾಪ್ ಕಂಪ್ಯೂಟರ್‌ಗಳಂತೆ ಸರಬರಾಜು ಮತ್ತು ಅಳವಡಿಕೆಯನ್ನು ಈಗಾಗಲೇ ಪೂರ್ಣಗೊಳಿಸಿದ್ದು, ಸದರಿ ಕಂಪ್ಯೂಟರ್‌ಗಳು ಸರಬರಾಜಾದ 03 ವರ್ಷಗಳವರೆಗೆ ಅಂದರೆ 18ನೇ ಏಪ್ರಿಲ್ **2016ರವರೆಗೆ ವಾರಂಟಿಯಲ್ಲಿರುತ್ತವೆ.**

| **Supplier Name & Address** | **Computer complaints log details** |
|---|---|
| The Managing Partner<br>M/s. Ninerich Infotech, # 934, 2nd E Cross, 9th A Main, H.R.B.R Layout, Banasawadi, Bangalore - 560 043.<br>LL 080 25450057 / 25450155<br>(M): 9845280907<br>Email: nswamy@ninerichinfotech.com | Tollfree No: **1800 425 0343**<br>The Website is<br>**www.ninerichinfotech.net**<br>Your login name is : **ssa13**<br>Password : **ssa13** |

ಉಲ್ಲೇಖ(2)ರ ಪತ್ರದಲ್ಲಿ ಮೆ॥Novateur Electrical & Digital Systems Pvt. Ltd ಸಂಸ್ಥೆಯವರು **2012-13ನೇ** ಸಾಲಿನಲ್ಲಿ 602 ಸಿ.ಎ.ಎಲ್.ಸಿ ಶಾಲೆಗಳಿಗೆ 2 ಕೆ.ವಿ.ಎ ಯು.ಪಿ.ಎಸ್‌ಗಳನ್ನು ಸರಬರಾಜು ಮತ್ತು ಅಳವಡಿಕೆಯನ್ನು ಈಗಾಗಲೇ ಪೂರ್ಣಗೊಳಿಸಿದ್ದು, ಸದರಿ ಯು.ಪಿ.ಎಸ್‌ಗಳು ಸರಬರಾಜಾದ 03 ವರ್ಷಗಳವರೆಗೆ ಅಂದರೆ **9ನೇ ಮೇ 2016ರವರೆಗೆ ವಾರಂಟಿಯಲ್ಲಿರುತ್ತವೆ.**

| **Supplier Name & Address** | **UPS complaints log details** |
|---|---|
| M/s. Novateur Electrical & Digital Systems Pvt. Ltd.<br>No.794, 12th Main, 1st Cross, HAL 2nd Stage, Indira Nagar, Bangalore-560 008<br>LL: 080 43038000<br>(M): 9901297956<br>Email: blrcreditcontrol@numericups.com | Tollfree No: **1800 425 3266**<br>The Website is<br>**www.nedspl.com**<br>Your login name is : **ssa13**<br>Password : **ssa13** |

ಈ ಅವಧಿಯಲ್ಲಿ ಕಂಪ್ಯೂಟರ್ ಮತ್ತು ಯು.ಪಿ.ಎಸ್‌ಗಳಲ್ಲಿ ದೋಷಗಳು ಕಂಡುಬಂದಲ್ಲಿ ಈ ಮೇಲ್ಕಂಡ ಅಂತರ್ಜಾಲಕ್ಕೆ ಅಥವಾ ಟೋಲ್ ಫ್ರೀ ಫೋನ್ ನಂಬರ್‌ಗೆ ಸಂಪರ್ಕಿಸಿ ದೂರುಗಳನ್ನು ನೀಡಿ, ಸರಿಪಡಿಸಿಕೊಳ್ಳಲು ಸೂಚಿಸಿದೆ. ಈ ಅವಕಾಶವನ್ನು ಸದುಪಯೋಗ ಮಾಡಿಕೊಳ್ಳಲು ಸೂಚಿಸಿದೆ. ದೂರುಗಳನ್ನು ನೋಂದಣಿ ಮಾಡದೆ ಕಂಪ್ಯೂಟರ್ / ಯು.ಪಿ.ಎಸ್‌ಗಳು ಕಾರ್ಯನಿರ್ವಹಿಸದ ಪಕ್ಷದಲ್ಲಿ ಸಂಬಂಧಿಸಿದ ಡಿ.ಡಿ.ಪಿ.ಐ(ಆಡಳಿತ) /ಡಿ.ಡಿ.ಪಿ.ಐ (ಅಭಿವೃದ್ಧಿ)ಗಳೇ ಹೊಣೆಗಾರರಾಗುತ್ತಾರೆ. ಶಾಲಾ ಹಂತದಲ್ಲಿ ವಾರಂಟಿ ಅವಧಿಗೆ ಒಂದು ವಹಿಯನ್ನು ನಿರ್ವಹಿಸಿ. ಈ ಬಗ್ಗೆ ಡಯಟ್ ಮತ್ತು ಉಪನಿರ್ದೇಶಕರ ಕಚೇರಿಯಲ್ಲಿ ಜಿಲ್ಲಾ ಹಂತದ/ಬ್ಲಾಕ್ ಹಂತದ ಅಧಿಕಾರಿಗಳು ಪ್ರತಿ ತಿಂಗಳು ಈ ಶಾಲೆಗಳಿಗೆ ಭೇಟಿ ನೀಡಿ, ದೂರು ದಾಖಲೆಗಳನ್ನು ಪರಿಶೀಲಿಸಿ, ದೂರುಗಳು ಪರಿಹರಿಸಿರುವ ಬಗ್ಗೆ ಉಸ್ತುವಾರಿ ಮಾಡುವುದು.

ಸರ್ವ ಶಿಕ್ಷಣ ಅಭಿಯಾನ

## ಸಿ.ಎ.ಎಲ್.ಸಿ ಶಾಲೆಗಳಲ್ಲಿ ಕಂಪ್ಯೂಟರ್ ಮತ್ತು ಯು.ಪಿ.ಎಸ್‌ಗಳ ಕಾರ್ಯನಿರ್ವಹಣೆಯ ದೂರು ದಾಖಲು ನಿರ್ವಹಣಾ ನಮೂನೆ

| ಶಾಲೆಯ ಹೆಸರು, ವಿಳಾಸ ಹಾಗೂ ದೂರವಾಣಿ ಸಂಪರ್ಕ ಸಂ. | ಕಂಪ್ಯೂಟರ್ ಪೂರೈಕೆಯಾದ ವರ್ಷ ಹಾಗೂ ಸರಬರಾಜು ಮಾಡಿದ ಸಂಸ್ಥೆ ವಿವರ | ಉಪಕರಣ ಕಾರ್ಯ ನಿರ್ವಹಿಸ ಲು ನಿಲ್ಲಿಸಿದ ದಿನಾಂಕ | ಯಾವ ಭಾಗದಲ್ಲಿ ತೊಂದರೆ ಉಂಟಾಗಿದೆ (ಕಂಪ್ಯೂಟರ್/ಯು.ಪಿ. ಎಸ್/ಇತರೆ) | ದೂರನ್ನು ನೀಡಿದ ದಿನಾಂಕ | ದೂರಿನ ನೊಂದಣಿ ಸಂಖ್ಯೆ (ಸಂಸ್ಥೆಯಿಂದ ನೀಡಲ್ಪಟ್ಟ ಸಂಖ್ಯೆ) | ಸಮಸ್ಯೆ ಬಗೆಹರಿದ ದಿನಾಂಕ | ಮುಖ ಪಾಧ ಯರ |
|---|---|---|---|---|---|---|---|
| | | | | | | | |

ಸಿ.ಎ.ಎಲ್.ಸಿ ಶಾಲೆಗಳಲ್ಲಿ ಕಂಪ್ಯೂಟರ್ ಮತ್ತು ಯು.ಪಿ.ಎಸ್‌ಗಳ ವಾರಂಟಿ ಅವಧಿಯಲ್ಲಿ ದೂರುಗಳನ್ನು ನೋಂದಾಯಿಸಲು ಇರುವ ಅವಕಾಶಗಳ ಬಗ್ಗೆ ಮಾಹಿತಿಗಳೇ ಇಲ್ಲದಿರುವುದು ಎಸ್.ಎಸ್.ಎಯ ನೋಡಲ್ ಅಧಿಕಾರಿಗಳ ಶಾಲಾ ಭೇಟಿ ಸಮಯದಲ್ಲಿ ಕಂಡುಬಂದಿರುತ್ತದೆ. ಆದ್ದರಿಂದ ಈ ಸದುಪಯೋಗವನ್ನು ಎಲ್ಲಾ ಸಿ.ಎ.ಎಲ್.ಸಿ ಶಾಲೆಗಳಲ್ಲಿನ ಮುಖ್ಯ ಶಿಕ್ಷಕರು/ಶಿಕ್ಷಕರಲ್ಲಿ ಅರಿವು ಮೂಡಿಸುವ ಜವಾಬ್ದಾರಿಯು ಸಂಬಂಧಿಸಿದ ಜಿಲ್ಲಾ ಉಪನಿರ್ದೇಶಕರು ಮತ್ತು ಡಯಟ್‌ನ ಇಟಿ-ಸೆಲ್‌ನ ನೋಡಲ್ ಅಧಿಕಾರಿಗಳದ್ದಾಗಿರುತ್ತದೆ. ಪ್ರತಿ ಶಾಲೆಯ ಸಿ.ಎ.ಎಲ್.ಸಿ ಕೇಂದ್ರಗಳಲ್ಲಿ ವಾರಂಟಿ ಸಂಬಂಧ ದರರಹಿತ ದೂರವಾಣಿ ಸಂಖ್ಯೆ ಮತ್ತು ಅಂತರ್ಜಾಲದ ವಿವರವನ್ನು ಸ್ಪಷ್ಟವಾಗಿ ಡಿಸ್‌ಪ್ಲೆ ಮಾಡುವುದು.

ಕಂಪ್ಯೂಟರ್ ಮತ್ತು ಯು.ಪಿ.ಎಸ್‌ಗಳ ಕಾರ್ಯನಿರ್ವಹಣೆಯಲ್ಲಿ ದೋಷಗಳು ಕಂಡುಬಂದಾಗ ಅವುಗಳ ಬಗ್ಗೆ ಮೇಲ್ಕಂಡ ಅಂತರ್ಜಾಲವಾಗಲಿ, ದರರಹಿತ ದೂರವಾಣಿ ಕರೆಯಿಂದಾಗಲಿ ದೂರುಗಳನ್ನು ದಾಖಲಿಸಿ, ದೂರು ನೋಂದಣಿ ಸಂಖ್ಯೆಯೊಂದಿಗೆ ದೂರುಗಳ ಮಾಹಿತಿಯನ್ನು ಹಾಗೂ ದೂರು ದಾಖಲಾತಿ ವಹಿಯಲ್ಲಿ ದೂರುಗಳು ಪರಿಹರಿಸಿದ ದಿನಾಂಕದೊಂದಿಗೆ ನಮೂದಿಸಿಕೊಂಡಿರಬೇಕು. ಈ ಮಾಹಿತಿಗಳಿದ್ದಾಗ ಸಂಸ್ಥೆಯೊಡನೆ ಕಂಪ್ಯೂಟರ್ ಮತ್ತು ಯು.ಪಿ.ಎಸ್‌ಗಳ ಕಾರ್ಯನಿರ್ವಹಣೆ ಬಗ್ಗೆ ವ್ಯವಹರಿಸಲು ಉಪಯುಕ್ತವಾಗುತ್ತದೆ. ಜಿಲ್ಲಾವಾರು ಕ್ರೋಢೀಕೃತ ಮಾಹಿತಿಯನ್ನು ಸದರಿ ಡಯಟ್‌ನ ಇಟಿ-ವಿಭಾಗದ ಮುಖ್ಯಸ್ಥರು ನಿರ್ವಹಿಸುವುದು.

ಸಹ ನಿರ್ದೇಶಕರು(ಕಾರ್ಯಕ್ರಮ)
ಸರ್ವ ಶಿಕ್ಷಣ ಅಭಿಯಾನ

ಪ್ರತಿ:

1. ಉಪನಿರ್ದೇಶಕರು(ಆಡಳಿತ) ಹಾಗೂ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು, ಸರ್ವ ಶಿಕ್ಷಣ ಅಭಿಯಾನ, ಎಲ್ಲಾ ಜಿಲ್ಲೆಗಳಿಗೆ ಇವರಿಗೆ ಮುಂದಿನ ಕ್ರಮಕ್ಕಾಗಿ
2. ಉಪನಿರ್ದೇಶಕರು(ಅಭಿವೃದ್ಧಿ) ಹಾಗೂ ಪ್ರಾಂಶುಪಾಲರು, ಜಿಲ್ಲಾ ಶೈಕ್ಷಣಿಕ ಮತ್ತು ತರಬೇತಿ ಸಂಸ್ಥೆ, ಎಲ್ಲಾ ಡಯಟ್‌ಗಳಿಗೆ ಮುಂದಿನ ಕ್ರಮಕ್ಕಾಗಿ
3. ಉಪನಿರ್ದೇಶಕರು(ಆಡಳಿತ), ಸರ್ವ ಶಿಕ್ಷಣ ಅಭಿಯಾನ ಇವರ ಮೂಲಕ 2012-13ನೇ ಸಾಲಿನ 602 ಸಿ.ಎ.ಎಲ್.ಸಿ ಶಾಲೆಗಳ ಮುಖ್ಯ ಶಿಕ್ಷಕರಿಗೆ ಮುಂದಿನ ಕ್ರಮಕ್ಕಾಗಿ
4. ರಾಜ್ಯ ಯೋಜನಾ ನಿರ್ದೇಶಕರ ಆಪ್ತ ಶಾಖೆಗೆ ನೀಡುತ್ತಾ, ಮಾನ್ಯರ ಅವಗಾಹನೆಗೆ ತರಲು ಕೋರಿದೆ
5. ಅಪರ ಆಯುಕ್ತರು, ಧಾರವಾಡ ಮತ್ತು ಗುಲ್ಬರ್ಗ ವಿಭಾಗಕ್ಕೆ ಅನುಪಾಲನೆಗಾಗಿ
6. ಮಾನ್ಯ ಆಯುಕ್ತರ ಕಚೇರಿ-ಇ-ಆಡಳಿತ ವಿಭಾಗಕ್ಕೆ ಸದರಿ ಜ್ಞಾಪನವನ್ನು ಎಸ್.ಎಸ್.ಎ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಕ್ರಮಕ್ಕಾಗಿ